# ಪ್ರೀತಿ ಪ್ರೇಮ ಡ್ರಾಮ

ಟಿ. ತಿಮ್ಮಪ್ಪ



## ಮುಗ್ಧ ಹುಡುಗಿಯೊಂದಿಗೆ ಬಸ್ ಪ್ರಯಾಣ

**ಸುನಿಲ್ ಕುಮಾರ್:**

ಅವತ್ತು ಸೋಮವಾರ. ವಾರದ ಪ್ರಾರಂಭಿಕ ದಿನ. ನಾನು ಮನೆಗೆ ಬಂದಾಗ ರಾತ್ರಿ ಸರಿಯಾಗಿ ಒಂಬತ್ತು ಗಂಟೆಯಾಗಿತ್ತು. ಮನೆಯ ಮುಂದೆ ನಿಂತ ಕಾರಿನ ಶಬ್ದವನ್ನೇ ನಿರೀಕ್ಷಿಸುತ್ತಾ ಕುಳಿತಿದ್ದವಳಂತೆ ನನ್ನ ಹೆಂಡತಿ ಶರಧಿ ಹೊರಗೆ ಬಂದು ಎರಡೂ ಗೇಟುಗಳನ್ನೂ ತೆರೆದಳು. ಕಾರನ್ನು ಪೋರ್ಟಿಕೋದಲ್ಲಿ ನಿಲ್ಲಿಸಿ ಒಳ ಬಂದವನೇ ಹಾಲಿನಲ್ಲಿದ್ದ ಸೋಫಾದ ಮೇಲೆ ಕುಸಿದು ಕುಳಿತುಕೊಂಡೆ. ಬೆಳಗಿನಿಂದ ಕಾರ್ಖಾನೆಯ ಹವಾನಿಯಂತ್ರಿತ ಕಾನ್ಫರೆನ್ಸ್ ರೂಮಿನಲ್ಲಿ ಜರುಗಿದ ಮ್ಯಾರಥಾನ್ ರಿವ್ಯೂ ಮೀಟಿಂಗಿನಲ್ಲಿ ಕುಳಿತು ನನ್ನ ಮೈಮನಸ್ಸುಗಳು ತೀವ್ರವಾಗಿ ಆಯಾಸಗೊಂಡಿದ್ದವು. ಗೇಟಿಗೆ ಬೀಗ ಹಾಕಿ ಮುಂಬಾಗಿಲನ್ನು ಮುಚ್ಚಿ ಒಳಬಂದ ಶರಧಿ ನಾನು ಕುಳಿತಿದ್ದ ಭಂಗಿಯನ್ನು ನೋಡಿ ಸಣ್ಣದಾಗಿ ಫ್ಯಾನು ಹಾಕಿ 'ರೀ..ಸ್ವಲ್ಪ ಟೀ ಮಾಡಿಕೊಡಲಾ..' ಎಂದು ತನ್ನ ಎಂದಿನ ಕಾಳಜಿ ತುಂಬಿದ ದನಿಯಲ್ಲಿ ಕೇಳಿದಳು.

ಬೆಳಗಿನಿಂದ ಸಾಕಷ್ಟು ಬಾರಿ ಟೀ ಕುಡಿದು ಹೊಟ್ಟೆ ಉಬ್ಬರಿಸಿಕೊಂಡಂತಾಗಿತ್ತು. 'ಬೇಡ..' ಎಂದು ಚುಟುಕಾಗಿ ಉತ್ತರಿಸಿ ಟೀಪಾಯಿಯ ಮೇಲಿದ್ದ ಟೀವಿ ರಿಮೋಟನ್ನು